

# ಮನುಜನ ಬೆಲೆ

**ತೈ**ಮೂರನೆಂಬ ಅರಸನಿದ್ದ. ಅವನು ನೋಡಲು ಕುರೂಪಿ, ಸ್ವಭಾವದಲ್ಲಿ ಕ್ರೂರಿ. ಅವನು ಎಷ್ಟೋ ಮನೆಗಳಿಗೆ ಬೆಂಕಿ ಇಟಿದ್ದ, ಎಷ್ಟೋ ಅಮಾಯಕರನ್ನು ದಂಡಿಸಿದ್ದ. ಕೊಲ್ಲಿಸಿದ್ದ. ಎಷ್ಟೋ ಸದ್ಗುಣಿಗಳನ್ನೂ ಜ್ಞಾನಿಗಳನ್ನೂ ಬಂಧನದಲ್ಲಿರಿಸಿದ್ದ. ಅವನ ಕ್ರೂರ ಕೃತ್ಯಗಳಿಗೆ ಕೊನೆಯೇ ಇರಲಿಲ್ಲ. ಎಲ್ಲರೂ ಅವನ ಮುಂದೆ ಭಯದಿಂದ ನಡಗುತ್ತಿದ್ದರು.

ಆದರೆ ತುರ್ಕಿಸ್ತಾನದ ಒಬ್ಬ ಮಹಾಕವಿ ಅವನನ್ನು ಧೈರ್ಯವಾಗಿ ಎದುರಿಸಿದ. ಅವನ ಹೆಸರು ಅಹಮದಿ. ಅವನನ್ನು ಬಂಧಿಸಿ ತೈಮೂರನ ಮುಂದೆ ನಿಲ್ಲಿಸಲಾಯಿತು. ತೈಮೂರನು ಕರ್ಣಕಠೋರ ಧ್ವನಿಯಲ್ಲಿ ಕೇಳಿದ: "ಕವಿಗಳೆಲ್ಲ ತುಂಬ ಜಾಣರೆಂದು ಕೇಳಿದ್ದೇನೆ. ಈಗ ಹೇಳು, ಈ ಭಟರಿಬ್ಬರ ಒಟ್ಟು ಬೆಲೆ ಎಷ್ಟು?"

ಕವಿ ಕೂಡಲೆ, "೪,೦೦೦ ರೂಪಾಯಿ" ಎಂದ.

ಕವಿ ಅಷ್ಟು ನಿಖರವಾಗಿ ಹೇಳಿದುದನ್ನು ಕೇಳಿ ತೈಮೂರನಿಗೆ ಆಶ್ಚರ್ಯವಾಯಿತು. ಅವನು ಮತ್ತೆ ಕೇಳಿದ, "ನನ್ನ ಬೆಲೆ ಎಷ್ಟು?" ಎಂದು.

"ಇಪ್ಪತ್ತನಾಲ್ಕು ರೂಪಾಯಿ" ಕವಿ ದಿಟ್ಟತನದಿಂದ ನುಡಿದ.

ತೈಮೂರ್ ಕಿಡಿಕಾರುತ್ತ, "ಏನು, ನನಗಷ್ಟೇ ಬೆಲೆಯೆ? ನೀನು ಹೇಳುತ್ತಿರುವುದು ನಾನು ತೊಟ್ಟಿರುವ ವಸ್ತ್ರದ ಬೆಲೆ."



"ಹೌದು, ನಾನು ಹೇಳಿರುವುದು ಅದನ್ನೇ," ಎಂದನು ಕವಿ.

"ಹಾಗಾದರೆ ನನಗೆ ಸ್ವಂತ ಬೆಲೆಯಿಲ್ಲವೇ?" ಅಬ್ಬರಿಸಿದ ರಾಜ.

ಕವಿ ಹೇಳಿದ : "ಇಲ್ಲ, ಸ್ವಲ್ಪವೂ ದಯೆಯಿಲ್ಲದಿದ್ದರೆ ಮನುಜ ಲಕ್ಷಣವೆಲ್ಲಿ? ಮನುಜನಲ್ಲದವನಿಗೆ ಬೆಲೆಯೆಲ್ಲಿ?"

ಈ ಮಾತು ತೈಮೂರನ ಹೃದಯವನ್ನು ತಾಕಿತು. ಕವಿಯನ್ನು ದಂಡಿಸದೆ, "ಇವನು ಹುಚ್ಚ, ಬಿಟ್ಟುಬಿಡಿ" ಎಂದನು.

ಕಲೆ : ಪುರುಷೋತ್ತಮ ಕಾರಂತ